ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾಯದಂಡಾಧಿಕಾರಿಯವರ ನ್ಯಾಯಾಲಯ, ಪೊನ್ನಂಪೇಟೆ.

# ಕ್ರಿಮಿನಲ್ ಮೊಕದ್ದಮೆ ಸಂಖ್ಯೆ 1142/2021.

ಫ್ರಾ.ಸಾ.ಃ 1
ಚಾ.ಸಾ.ಃ 1

| | | |
|---|---|---|
| ಹೆಸರು | ಃ | ಮಾಚಿಮಾಡ ದೇವಯ್ಯ |
| ತಂದೆಯ ಹೆಸರು | ಃ | ಲೇಟ್ ಮುತ್ತಣ್ಣ |
| ವಯಸ್ಸು | ಃ | 73 ವರ್ಷ. |
| ಉದ್ಯೋಗ | ಃ | ಕೃಷಿ |
| ವಿಳಾಸ | ಃ | ಶ್ರೀಮಂಗಲ |

... ..................................................................................... ...

ದಿನಾಂಕ 19 ನೇ ಫೆಬ್ರವರಿ 2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.

## ದೋಷಾರೋಪಣೆ ಪಟ್ಟಿ ರಚಿಸುವ ಪೂರ್ವದ ಸಾಕ್ಷಿ ವಿಚಾರಣೆ

ಮುಖ್ಯ ವಿಚಾರಣೆ ಃ ದೂರುದಾರರ ಪರ ಶ್ರೀ ಎಂ. ಜಿ. ಆರ್ ವಕೀಲರಿಂದಃ-

ನಾನು ನಾಲ್ಕೇರಿ ಗ್ರಾಮದಲ್ಲಿ ಕೆ ಟಿ ಬೋಪಯ್ಯ ರವರ ಕಡೆಯಿಂದ 69 ಸೆಂಟ್ ಕಾಫಿ ತೋಟವನ್ನು 2002 ರಲ್ಲಿ ಖರೀದಿಸಿದ್ದೆ. ಸದರಿ ತೋಟಕ್ಕೆ ಕೆ ಟಿ ಬೋಪಯ್ಯ ರವರ ತಂದೆ ಮಾಡಿದ್ದ ಕಟಿಂಗ್ಸ್ ಬೇಲಿ ಇತ್ತು, ಸದರಿ ಬೇಲಿಯನ್ನು ಕೆ ಟಿ ಬೋಪಯ್ಯ ರವರು ನೋಡಿಕೊಳ್ಳುತ್ತಿದ್ದರು. ಸದರಿ 69 ಸೆಂಟ್ ಜಾಗದಲಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದೇನೆ. ನಮ್ಮ ತೋಟಕ್ಕೆ ಹತ್ತಿರದ ಊರಿನವರ ದನಗಳು ಬರುತ್ತಿದ್ದವು. ಅವುಗಳಿಂದ ನಮಗೆ ತೊಂದರೆಯಾಗುತ್ತಿತ್ತು. ಆದುದರಿಂದ ನಾನು 01.10.2019 ರಂದು 22 ಸಿಮೆಂಟ್ ಪೋಲ್‌ಗಳನ್ನು ತಂದು 4 ಸಾಲು ಮುಳ್ಳುತಂತಿ ಬೇಲಿಯನ್ನು ಹಾಕಿದ್ದೆ. ದಿಃ02.10.2019 ರಂದು ಕುಟ್ಟ ಪೊ. ಠಾಣೆಯಿಂದ ಫೋನ್ ಮಾಡಿ ನಿಮ್ಮ ವಿರುದ್ಧ ಒಂದು ಪುಕಾರಿದೆ ಠಾಣೆಗೆ ಬನ್ನಿ ಎಂದು ತಿಳಿಸಿದರು. ಅದರಂತೆ ದಿಃ 04.10.2019 ರಂದು ನಾನು ಠಾಣೆಗೆ ಹೋಗಿದ್ದೆ. ಆ ದಿನವೆ ಪೋಲೀಸರು ಮತ್ತು ಠಾಣೆಯ ರೈಟರ್ ರವರು ಬಂದು ನಮ್ಮ ಸ್ಥಳ ಪರಿಶೀಲಿಸಿದರು. ಅಲ್ಲಿ ಯಾವುದೆ ಒತ್ತುವರಿಯಾಗಿಲ್ಲ ಎಂದು ನೋಡಿಕೊಂಡು ಹೋದರು.

ನಂತರ ದಿಃ15.10.2019 ರಂದು ನಮ್ಮ ಮನೆಯ ದಾಟಿ ಮುಂದಕ್ಕೆ ಹೋಗುವ ರಸ್ತೆಯಲ್ಲಿ 7 ರಿಂದ 8 ಜನ ಬಂದು ಇಲ್ಲಿ ಒತ್ತುವರಿಯಾಗಿದೆ ಎಂದು ಬೇಲಿಯನ್ನು ಕಿತ್ತು ತಂತಿಯನ್ನು ತೆಗೆದು ಎಂ. ಕೆ. ಭೀಮಯ್ಯ, ಮುತ್ತಪ್ಪ ಎಸ್. ಕೆ ವೇಣು, ಎಸ್. ಎಸ್. ಸುಬ್ಬಯ್ಯ, ಪಿ. ಕೆ. ಅಯ್ಯಪ್ಪ ಟಿ. ಎ. ರವಿ, ಜೀಪಿನಲ್ಲಿ ಹಾಕಿಕೊಳ್ಳುತ್ತಿದ್ದರು. ಆ ಸಮಯದಲ್ಲಿ ನನ್ನ ಪತ್ನಿ ಇಲ್ಲಿ ಏನು ಆಗುತ್ತಿದೆ ಎಂದು ನೋಡಲು ಹೋದಾಗ ಅವರಲ್ಲರೂ ನನ್ನ ಪತ್ನಿಗೆ ಬೈಯ್ದಿರುತ್ತಾರೆ ಮತ್ತು ಜೀವ ಬೆದರಿಕೆ ಹಾಕಿರುತ್ತಾರೆ. ನೀವೇ ಒತ್ತುವರಿ ಮಾಡಿರುತ್ತೀರಿ ಎಂದು ನನ್ನ ಪತ್ನಿಗೆ ಬೆದರಿಕೆ ಹಾಕಿರುತ್ತಾರೆ. ನೀವೆ ಒತ್ತುವರಿ ಮಾಡಿ ನಮಗೆ ಏಕೆ ಹೇಳುತ್ತಿದ್ದೀರಿ ಎಂದು ನನ್ನ ಪತ್ನಿಗೆ ಬೈಯ್ದಿರುತ್ತಾರೆ. ಕುಟುಂಬವನ್ನು ಕುರಿತು ಬೈಯ್ದಿರುತ್ತಾರೆ. ನಾನು ಆ ದಿನ ಕಚೇರಿಯ ಕೆಲಸದ ಮೇಲೆ ಹೊರಗೆ ಹೋಗಿದ್ದೆ, ಮಧ್ಯಾಹ್ನ 2 ಗಂಟೆಗೆ ವಾಪಸ್ಸು ಬರುವಾಗ ನನ್ನ ಪತ್ನಿ ಎಲ್ಲಾ ವಿಷಯವನ್ನು ವಿವರವಾಗಿ ತಿಳಿಸಿದರು. ನಾನು ಊಟ ಮುಗಿಸಿ ಕೂಡಲೆ ಪೊಲೀಸ್ ಠಾಣೆಗೆ ಹೋಗಿ ಪುಕಾರು ಅರ್ಜಿ ಕೊಟ್ಟೆ ಪೊಲೀಸರು ನಾಳೆ ಬಂದು ನೋಡುತ್ತೇನೆ ಅಂತ ನನಗೆ ತಿಳಿಸಿದರು. ಆದರೆ ಪೊಲೀಸರು ಯಾವುದೆ ಕ್ರಮ ಕೈಗೊಳ್ಳಲಿಲ್ಲ ಆದ್ದರಿಂದ ನಾನು ನ್ಯಾಯಾಲಯಕ್ಕೆ ದೂರು ಕೊಟ್ಟಿದ್ದೇನೆ.

ಆ ದಿನ ಬಂದಿದ್ದ 7-8 ಜನರು ನಮ್ಮ ಕಂಬ ಮತ್ತು ಮುಳ್ಳು ತಂತಿ ತೆಗೆದು ಮಂಡಲ್ ಪಂಚಾಯಿತಿಯ ಬಳಿ ಇಡುತ್ತೇವೆ, ನೀವು ಕೋರ್ಟಿಗಾದರೂ ಹೋಗಿ ಪೊಲೀಸ್ ಠಾಣೆಗಾದರೂ ಹೋಗಿ ಏನಾದರೂ ಮಾಡಿಕೊಳ್ಳಿ ಎಂದು ನನಗೆ ತಿಳಿಸಿದರು. ಆ ದಿನ ಬಂದಿದ್ದ 7-8 ಜನರ ಹೆಸರು ಎಂ ಕೆ ಬೀಮಯ್ಯ, ಬಿ ಕೆ ಅಯ್ಯಪ್ಪ, ಟಿ ಎ ರವಿ, ಎಸ್ ಎಸ್ ಸುಬ್ಬಯ್ಯ, ಎಸ್ ಕೆ ವೇಣು, ಎ ಬಿ ಮುತ್ತಪ್ಪ ರವರುಗಳ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಪಂಚಾಯಿತಿಯವರು ಸ್ವಲ್ಪದಿನಗಳ ನಂತರ ನನಗೆ ಒಂದು ನೋಟೀಸ್ ಅನ್ನು ನೀಡಿದ್ದರು ಅದಕ್ಕೆ ಪಿ ಡಿ ಓ ರವರು ಸಹಿ ಮಾಡಿರಲಿಲ್ಲ, 1 ನೇ ಆರೋಪಿ ಸಹಿ ಮಾಡಿದ್ದರು. ಸದರಿ ನೋಟೀಸ್‌ನಲ್ಲಿ ಕಂಬಗಳನ್ನು ತೆಗೆದು ಪಂಚಾಯಿತಿಗೆ ತೆಗೆದುಕೊಂಡು ಹೋಗಲು ಆದ ಖರ್ಚನ್ನು ನೀಡಿ, ಕಂಬ ತೆಗೆದುಕೊಂಡು ಹೋಗಿ ಎಂದು ತಿಳಿಸಿದರು.

ನನ್ನ ದೂರಿನ ಸಂಬಂಧ ಈಗಾಗಲೇ ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿ ಸಿ 1 ರಿಂದ ನಿ ಸಿ 6 ಎಂದು ಗುರುತಿಸಲಾಗಿದ್ದು ಅವುಗಳನ್ನು ನಿ

ಪಿ 1 ರಿಂದ ನಿ ಪಿ 6 ಎಂದು ಗುರುತಿಸಲಾಯಿತು. ದಿಃ 03.05.2000 ನೇ ಸಾಲಿನ ಶುದ್ದ ಕ್ರಯಪತ್ರ ದೃಡಿಕೃತ ನಕಲು ನಿ ಪಿ 1, ಸರ್ವೆ ನಂಃ 94/2 ಸಿ ರ ಆರ್ ಟಿ ಸಿ ಯನ್ನು ನಿ ಪಿ 2, ದಿಃ02.10.2019 ರ ಪೊಲೀಸ್ ನೋಟೀಸ್ ನಿ ಪಿ 3, ದಿಃ16.10.2010 ರ ದೂರು ಅರ್ಜಿ ನಿ ಪಿ 4, ಗ್ರಾಮ ಪಂಚಾಯಿತಿ ಅಧ್ಯಕ್ಷರು ನೀಡಿರುವ ನೋಟೀಸ್ ನಿ ಪಿ 5, ದಿಃ12.02.2008 ರ ನೋಟೀಸ್ ನಿ ಪಿ 6 ಎಂದು ಗುರುತಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಖ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿರುತ್ತದೆ)

ಓ. ಹೇ. ಕೇ. ಸ. ಇ. ಎ. ಒ.

Sdxxx-
ಜೆ.ಎಂ.ಎಫ್.ಸಿ. ನ್ಯಾಯಾಧೀಶರು,
ಪೊನ್ನಂಪೇಟೆ.

ಸಾಕ್ಷಿದಾರರ ಸಹಿ